# **ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.**

**ಎಸ್.ಸಿ. ಸಂಖ್ಯೆ 93/2021**

| | | |
|---|---|---|
| **ಸಾಕ್ಷಿದಾರರ ಹೆಸರು** | : ಮೋಹನಾ ಎಂ. | **ಪಿಡಬ್ಲ್ಯೂ :** 12 |
| **ತಂದೆಯ / ಗಂಡನ ಹೆಸರು** | : ಮಹದೇವಸ್ವಾಮಿ | **ಸಿಡಬ್ಲ್ಯೂ :** 20 |
| **ವಯಸ್ಸು** | : 30 ವರ್ಷ | |
| **ಉದ್ಯೋಗ** | : ಚಾಲಕ | |
| **ವಾಸಸ್ಥಳ** | : ಕೆಸರೆ , ಕುರಿಮಂಡಿ , ಮೈಸೂರು | |

**ಸಾಕ್ಷಿಯನ್ನು ಈ ದಿನ ದಿಃ 14.09.2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ನಾನು ಸಹಿ ಹಾಕುತ್ತೇನೆ. ಈಗ ತೋರಿಸುತ್ತಿರುವ ದಾಖಲಾತಿಯ ಮೇಲೆ ನನ್ನ ಸಹಿ ಇರುತ್ತದೆ. ಅದು ದಿಃ 24.12.2020 ರಂದು ಮಾಡಿದ ಅಮಾನತ್ತು ಮಹಜರ್ ಆಗಿದ್ದು , ಅದನ್ನು ಈಗಾಗಲೇ ನಿಪಿ 22 ಎಂದು ಗುರುತುಪಡಿಸಿಕೊಳ್ಳಲಾಗಿದ್ದು, ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 22(ಬಿ) ಎಂದು ಗುರುತುಪಡಿಸಿಕೊಳ್ಳಲಾಯಿತು. ದಿಃ 24.12.2020 ರಂದು ನಾನು ಮಧ್ಯಾಹ್ನ ಕೆಲಸ ಮುಗಿಸಿ ಊಟಕ್ಕೆ ಎಂದು 02.15 ರಿಂದ 02.30 ರ ಸಮಯಕ್ಕೆ ಮನೆಗೆ ಹೋಗುತ್ತಿದ್ದೆ. ಆಗ ನರಸಿಂಹರಾಜ ಪೋಲೀಸ್ ಠಾಣೆಯ ಹತ್ತಿರ ಹೋಗುತ್ತಿದ್ದಾಗ ಅಲ್ಲಿಯ ಪೋಲೀಸರು, ಒಂದು ಮಹಜರ್ ಇದೆ , ಬನ್ನಿ ಎಂದು ನನ್ನನ್ನು ಕರೆದರು. ಅಲ್ಲಿ ಹೋದಾಗ ಠಾಣೆಯ ಒಳಗೆ ಒಬ್ಬ ಹುಡುಗ ಇದ್ದ. ನನ್ನೊಂದಿಗೆ ಶಶಿ ಕುಮಾರ್ ಎನ್ನುವವರು ಸಹ

ಬಂದರು. ಅಲ್ಲಿ ಇದ್ದ ಹುಡುಗನ ಹೆಸರು ಜಯಸೂರ್ಯ ಎಂದಾಗಿತ್ತು. ಆ ಜಯಸೂರ್ಯ ಒಂದು ಮೊಬೈಲ್ ನ್ನು ಪೋಲೀಸರಿಗೆ ಹಾಜರುಪಡಿಸಿದ್ದ. ಅದನ್ನು ಪೋಲೀಸರು ನಮ್ಮ ಮುಂದೆ ಓಪನ್ ಮಾಡಿದರು. ಅದು ವಿವೋ ಕಂಪನಿಯ ಮೊಬೈಲ್ ಆಗಿತ್ತು. ಅದರೊಳಗೆ ಏರ್ ಟೆಲ್ ಕಂಪನಿಯ ಸಿಮ್ ಕಾರ್ಡ ಇತ್ತು. ಆ ಸಿಮ್ ನ ನಂಬರ್ 9972994028 ಆಗಿತ್ತು. ಆ ಮೊಬೈಲ್ ನ್ನು ಓಪನ್ ಮಾಡಿ, ವ್ಯಾಟ್ಸ್ ಅಪ್ ಗೆ ಹೋದಾಗ ಅಲ್ಲಿ ವಿನು ಅಣ್ಣ ಎಂದು ಒಂದು ನಂಬರ್ ಸೇವ್ ಆಗಿತ್ತು. ಅದನ್ನು ಓಪನ್ ಮಾಡಿದಾಗ ಆ ವ್ಯಾಟ್ಸ್ ಅಪ್ ನಲ್ಲಿ 3 ಮೆಸೇಜ್ ಗಳು ಹಾಗೂ 3 ಪೋಟೋಗಳು ಇದ್ದವು. ಆ ಪೋಟೋದಲ್ಲಿ ಒಬ್ಬ ವಕ್ತಿ ಮಲಗಿದ್ದು, ಆತನ ಮೇಲೆ ಕುಳಿತು ಬಟ್ಟೆಯಿಂದ ಆತನ ಕುತ್ತಿಗೆಯನ್ನು ಬಿಗಿಯುತ್ತಿರುವ ಹಾಗಿತ್ತು. ಮೆಸೇಜ್ ನಲ್ಲಿ 1, ಮುಗಿಯಿತು ಕಥೆ, 2. ಅವ್ನದು. 3. Dont worry Jayasurya ಎಂದಿತ್ತು. ಈ ಮೂರು ಮೆಸೇಜ್ ಗಳನ್ನು ಇಂಗ್ಲಿಷನಲ್ಲೇ ಟೈಪ್ ಮಾಡಲಾಗಿತ್ತು. ಆ ಮೆಸೇಜ್ ಗಳು ಸದರಿ ಮೊಬೈಲ್ ನ ವ್ಯಾಟ್ಸ್ ಅಪ್ ಗೆ ದಿಃ 15.12.2020, ರಂದು 02.55 **a**.**m**. ರಿಂದ 02.56 **a**.**m**., ರೊಳಗೆ ಬಂದಿದ್ದವು. ನಂತರ ಆ ಮೊಬೈಲ್ ನ್ನು ಬಿಳಿಯ ಬಟ್ಟೆ ಒಳಗೆ ಹಾಕಿ ಸೀಲು ಮಾಡಿ M ಎಂಬ ಅಕ್ಷರವನ್ನು ಒತ್ತಿದರು. ನಂತರ ನನ್ನ , ಜಯಸೂರ್ಯನ ಹಾಗೂ ಶಶಿಕುಮಾರ್ ನ ಸಹಿಗಳನ್ನು ಒಂದು ಚೀಟಿಯ ಮೇಲೆ ಪಡೆದು ಅದನ್ನು ಆ ಬಿಳಿ ಬಟ್ಟೆಯ ಕವರ್ ನ ಮೇಲೆ ಅಂಟಿಸಿದರು. ನಂತರ ಬರವಣಿಗೆಯನ್ನು ಮಾಡಿ ನನ್ನ ಸಹಿಯನ್ನು ಪಡೆದರು. ಆ ಮೊಬೈಲ್ ನಲ್ಲಿ ಇದ್ದಂತಹ ಮೆಸೇಜ್ ಗಳು ಮತ್ತು ಪೋಟೋಗಳನ್ನು ನೋಡಿದರೆ ಗುರುತಿಸುತ್ತೇನೆ. ನಿಪಿ 14 ರಿಂದ 17 ಪೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಆ ಪೋಟೋಗಳಲ್ಲಿ ಕಾಣುವ ವ್ಯಕ್ತಿಯ ಪರಿಚಯ ನನಗೆ ಇದೆ. ಆ ಪೋಟೋಗಳಲ್ಲಿ

ಕೆಳಗಡೆ ಮಲಗಿರುವ ವ್ಯಕ್ತಿ ಮೃತ ರವಿ. ಆತನ ಮೇಲೆ ಕುಳಿತಿರುವ ವ್ಯಕ್ತಿ 1 ನೇ ಆರೋಪಿ ವಿನಯ್ ಆಗಿರುತ್ತಾನೆ. ಮೃತ ರವಿ ಹಾಗೂ ವಿನಯ್ ಕುರಿಮಂಡಿಯಲ್ಲೇ ವಾಸ ಮಾಡುತ್ತಿದ್ದರು. ಹೀಗಾಗಿ ಅವರುಗಳು ಗೊತ್ತಿತ್ತು. ನಾನೂ ಸಹ ಅಲ್ಲಿಯೇ ವಾಸ ಮಾಡುತ್ತೇನೆ. ಆ ವಿನಯ್ ಇಂದು ನ್ಯಾಯಾಲಯದ ಮುಂದಿದ್ದಾನೆ. ಆನನ್ನು ನೋಡಿ ಗುರುತಿಸುತ್ತೇನೆ.

2. ಈಗ ತೋರಿಸುತ್ತಿರುವ ಬಿಳಿ ಬಟ್ಟೆಯ ಬ್ಯಾಗ್ ನ ಮೇಲೆ ಇರುವ ಚೀಟಿಯಲ್ಲಿ ನನ್ನ ಸಹಿ ಇರುತ್ತದೆ. ಅದರೊಳಗಿದ್ದ ಮೊಬೈಲ್ ನ್ನು ಹೊರ ತೆರೆದು ಸಾಕ್ಷಿಗೆ ತೋರಿಸಲಾಗಿ ಸದರಿ ಮೊಬೈಲ್ ನ್ನು ಗುರುತಿಸಿರುತ್ತಾರೆ. ಸದರಿ ಮೊಬೈಲ್ ನ್ನು ಈಗಾಗಲೇ ಎಂ ಒ 11 ಎಂದು ಗುರುತುಪಡಿಸಿಕೊಳ್ಳಲಾಗಿದೆ.

3. ನಂತರ ದಿಃ 02.01.2021 ರಂದು ಎನ್ ಆರ್ ಪೋಲೀಸರು, ಸೈಬರ್ ಕ್ರೈಂ ಪೋಲೀಸ್ ಠಾಣೆಗೆ ಹೋಗಬೇಕು ಎಂದು ಹೇಳಿ ನನ್ನನ್ನು ಕರೆಯಿಸಿಕೊಂಡರು. ನಾನು ಎನ್ ಆರ್ ಪೋಲೀಸ್ ಠಾಣೆಗೆ ಹೋದೆ. ನನ್ನನ್ನು ಮತ್ತು ಶಶಿಕುಮಾರ್ ನನ್ನು ಜೀಪಿನಲ್ಲಿ ಸೈಬರ್ ಪೋಲೀಸ್ ಠಾಣೆಗೆ ಅಂದರೆ ಅಶೋಕಪುರಂ ಪೋಲೀಸ್ ಠಾಣೆಯ ಮೊದಲನೇ ಮಹಡಿಯಲ್ಲಿರುವ ಆ ಠಾಣೆಗೆ ಕರೆದುಕೊಂಡು ಹೋದರು. ಆ ಠಾಣೆಗೆ ಹೋದಾಗ ಸಂಜೆ 06.30 ಆಗಿತ್ತು. ದಿಃ 24.12.2020 ರಂದು ಸೀಲು ಮಾಡಿದ್ದಂತಹ ಮೊಬೈಲ್ ನ್ನು ಅಲ್ಲಿ ಇದ್ದಂತಹ ಮಧು ಎನ್ನುವ ಪೋಲೀಸ್ ಮುಂದೆ ಹಾಜರುಪಡಿಸಿದರು. ನಂತರ ಅದರ ಮೇಲೆ ಇದ್ದಂತ ಸೀಲು ಸರಿಯಾಗಿದೆಯೋ ಇಲ್ಲವೋ ಎನ್ನುವುದನ್ನು ನಮಗೆ ತೋರಿಸಿ ಖಚಿತಪಡಿಸಿಕೊಂಡು ನಂತರ ಆ ಸೀಲನ್ನು ತೆರೆದು ಆ ಬಿಳಿ ಬಟ್ಟೆ ಸಣ್ಣ ಬ್ಯಾಗ್ ನಲ್ಲಿ ಇದ್ದಂತಹ ಮೊಬೈಲ್ ನ್ನು ಹೊರ ತೆಗೆದು, ನಿಮ್ಮ ಮುಂದೆ ಅಮಾನತ್ತು ಪಡಿಸಿಕೊಂಡ

ಮೊಬೈಲ್ ಇದೇನಾ ಎಂದು ನಮ್ಮನ್ನು ಕೇಳಿ ನಂತರ ನಾವು ಹೌದು ಎಂದ ಮೇಲೆ ಅಲ್ಲಿದ್ದ ಪೋಲೀಸ್ ಮಧು ರವರಿಗೆ ಕೊಟ್ಟರು. ನಂತರ ಸದರಿ ಮೊಬೈಲನ್ನು ಕಂಪ್ಯೂಟರ್ ಗೆ ಅಳವಡಿಸಿ ಆ ಮೊಬೈಲ್ ನಲ್ಲಿದ್ದ ಮೆಸೇಜ್ ಗಳನ್ನು ಮತ್ತು ಪೋಟೋಗಳನ್ನು ವರ್ಗಾಯಿಸಿಕೊಂಡರು. ಈ ಪ್ರಕ್ರಿಯ ಆ ಠಾಣೆಯಲ್ಲಿ ಸಂಜೆ 06.30 ರಿಂದ 08.00 ಗಂಟೆಯವರೆಗೂ ನಡೆಯಿತು. ನಂತರ ಆ ಮೊಬೈಲನ್ನು ಪುನಃ ಎನ್ ಆರ್ ಪೋಲೀಸ್ ಠಾಣೆಯ ಅಜರ್ ಹುದ್ದಿನ್ ಸಾರ್ ರವರಿಗೆ ಹಸ್ತಾಂತರಿಸಿದರು. ಅವರು ಪುನಃ ಆ ಮೊಬೈಲನ್ನು ಸದರಿ ಬಿಳಿ ಬಟ್ಟೆಯ ಸಣ್ಣ ಬ್ಯಾಗ್ ನೊಳಗೆ ಹಾಕಿ ಅದರ ಬಾಯಿಯನ್ನು ಹೊಲೆದು ನಂತರ ಸೀಲು ಮಾಡಿ **M** ಅಕ್ಷರದ ಮುದ್ರೆಯನ್ನು ಒತ್ತಿದರು. ಈ ಪ್ರಕ್ರಿಯಗಳ ಬಗ್ಗೆ ಬರವಣಿಗೆಯನ್ನು ಮಾಡಿ ನನ್ನ ಸಹಿಯನ್ನು ಪಡೆದರು. ಈಗ ತೋರಿಸುತ್ತಿರುವ ದಾಖಲಾತಿಯ ಮೇಲೆ ನನ್ನ ಸಹಿ ಇರುತ್ತದೆ. ಅದು ದಿಃ 02.01.2021 ರಂದು ಮಾಡಿದ Mobile Data Extract ಮಾಡಿದ ಮಹಜರ್ ನ ಟ್ರೂ ಕಾಪಿ ಆಗಿದ್ದು, ಅದನ್ನು ಆರೋಪಿ ಪರ ವಕೀಲರ ಆಕ್ಷೇಪಣೆಗೆ ಒಳಪಟ್ಟು ನಿಪಿ 29 ಎಂದು ಗುರುತುಪಡಿಸಿಕೊಳ್ಳಲಾಯಿತು. ಆ ಸಮಯದಲ್ಲಿ ಪೋಟೋಗಳನ್ನು ತೆಗೆದರು. ಆ ಪೋಟೋಗಳನ್ನು ನಾನು ಈಗ ನೋಡುತ್ತಿದ್ದೇನೆ. ಅವು ಒಟ್ಟು 2 ಪೋಟೋಗಳಿದ್ದು, ಅವುಗಳನ್ನು ನಿಪಿ 30 ಮತ್ತು 31 ಎಂದು ಗುರುತುಪಡಿಸಿಕೊಳ್ಳಲಾಯಿತು. ಸದರಿ ಪೋಟೋಗಳಲ್ಲಿ ನಾನು ಇದ್ದೇನೆ.

4. ದಿಃ 16.02.2022 ರಂದು ನನ್ನನ್ನು ಪುನಃ ಎನ್ ಆರ್ ಪೋಲೀಸ್ ಠಾಣೆಗೆ ಕರೆಸಿದ್ದರು. ಪುನಃ ಸೈಬರ್ ಠಾಣೆಗೆ ಮಹಜರ್ ಗಾಗಿ ಹೋಗಬೇಕು ಎಂದು ನನ್ನನ್ನು ಮತ್ತು ಶಶಿಕುಮಾರ್ ನನ್ನು ಪುನಃ ಸೈಬರ್ ಪೋಲೀಸ್ ಠಾಣೆಗೆ ಕರೆದುಕೊಂಡು ಹೋದರು. ಅಲ್ಲಿ

ಒಂದು Samsung Galaxy A-21S ನಿಂದ ಮಾಹಿತಿಯನ್ನು extract ಮಾಡಬೇಕು ಎಂದು ತಿಳಿಸಿದರು. ಆ ಮೊಬೈಲ್ ನಲ್ಲಿ ಸಿಮ್ ಕಾರ್ಡ ಇರಲಿಲ್ಲ. ಅದು ಆನ್ ಆಗಿರಲಿಲ್ಲ. ಅದನ್ನು ಸಾಲದಲ್ಲಿ ತೆಗೆದುಕೊಂಡಿದ್ದರು ಮತ್ತು EMI ಕಟ್ಟಿರಲಿಲ್ಲ ಎಂದು ಆ ಮೊಬೈಲ್ ವರ್ಕ ಆಗುತ್ತಿರಲಿಲ್ಲ. ಆಗ ಸೈಬರ್ ಕ್ರೈಂ ಪೋಲೀಸರು ಸದರಿ ಮೊಬೈಲ್ ನಲ್ಲಿರುವ ಮಾಹಿತಿಯನ್ನು extract ಮಾಡಲು ಆಗುವುದಿಲ್ಲ , EMI ಕಟ್ಟಿ ಒಂದು ಡೂಪ್ಲಿಕೇಟ್ ಸಿಮ್ ಅಳವಡಿಸಿದಲ್ಲಿ ಮಾತ್ರವೇ ಮಾಹಿತಿಯನ್ನು extract ಮಾಡಬಹುದು ಎಂದು ತಿಳಿಸಿದರು. ನಂತರ ಆ ಮೊಬೈಲ್ ನ್ನು ಪುನಃ ಎನ್ ಆರ್ ಪೋಲೀಸರಿಗೆ ಹಸ್ತಾಂತರಿಸಿದರು. ಅವರು ಸದರಿ ಮೊಬೈಲ್ ನ್ನು ಪುನಃ ಬಿಳಿ ಬಟ್ಟೆಯ ಬ್ಯಾಗ್ನೊಳಗೆ ಹಾಕಿ ಸೀಲು ಮಾಡಿ M ಮುದ್ರೆಯನ್ನು ಒತ್ತಿದರು. ಈ ಪ್ರಕ್ರಿಯ ಸಂಜೆ 04.00 ರಿಂದ 05.00 ಗಂಟೆಯವರೆಗೆ ನಡೆಯಿತು.

5. ದಿಃ 06.03.2021 ರಂದು ಪುನಃ ಸದರಿ ಪೋಲೀಸರು ನನಗೆ ಪೋನ್ ಮಾಡಿ ಠಾಣೆಗೆ ಕರೆಸಿಕೊಂಡರು. ಆಗ ಶಶಿ ಕುಮಾರ್ ಸಹ ಬಂದರು. ಅಲ್ಲಿ ತನಿಖಾಧಿಕಾರಿಯವರು 16 ನೇ ತಾರೀಖಿನಂದು ಸೈಬರ್ ಠಾಣೆಗೆ ಹೋದಾಗ ಕೆಲಸ ಆಗಿರುವುದಿಲ್ಲ , ಈಗ ಆ ಮೊಬೈಲ್ ಗೆ EMI ಕಟ್ಟಿದ್ದೇವೆ ಮತ್ತು ಡ್ಯೂಪ್ಲಿಕೇಟ್ ಸಿಮ್ ಪಡೆದಿದ್ದೇವೆ , ಆ ಮೊಬೈಲ್ ನಿಂದ ಮಾಹಿತಿಯನ್ನು ಹೊರ ತೆಗೆಯಬೇಕು, ಅದಕ್ಕಾಗಿ ಸೈಬರ್ ಠಾಣೆಗೆ ಪುನಃ ಹೋಗಬೇಕು ಎಂದು ತಿಳಿಸಿದರು. ನಂತರ ಜೇಪಿನಲ್ಲಿ ಎಲ್ಲರೂ ಸೈಬರ್ ಠಾಣೆಗೆ ಹೋದೆವು. ನಂತರ ಆ ಮೊಬೈಲ್ ನ್ನು ಆ ಬಿಳಿ ಬಟ್ಟೆಯ ಬ್ಯಾಗ್ ನಿಂದ ಹೊರ ತೆಗೆದು ಅದಕ್ಕೆ ಡ್ಯೂಪ್ಲಿಕೇಟ್ ಸಿಮ್ ಅಳವಡಿಸಿದರು. ಆಗ ಆ ಮೊಬೈಲ್ ಆನ್ ಆಯಿತು. ನಂತರ ಆ ಮೊಬೈಲ್ ನಲ್ಲಿ ಇದ್ದಂತಹ ಪೂರ್ತಿ ಮಾಹಿತಿಯನ್ನು ಒಂದು ಪೆನ್

ಡ್ರೆವ್ ಗೆ ಕಾಪಿ ಮಾಡಿಕೊಂಡರು. ಇದನ್ನು ಸೈಬರ್ ಪೋಲೀಸರು ಮಾಡಿರುತ್ತಾರೆ. ನಂತರ ಆ ಮೊಬೈಲ್ ಮತ್ತು ಪೆನ್ ಡ್ರೆವ್ ನ್ನು ತನಿಖಾಧಿಕಾರಿಗೆ ನೀಡಿದರು. ನಂತರ ಆ ಮೊಬೈಲ್ ನ್ನು ಪುನಃ ಆ ಬಿಳಿ ಬಣ್ಣದ ಬಟ್ಟೆಯ ಬ್ಯಾಗ್ ಗೆ ಹಾಕಿ, ಸೀಲು ಮಾಡಿ, M ಅಕ್ಷರದ ಮುದ್ರೆಯನ್ನು ಒತ್ತಿದರು. ನಂತರ ಅದರ ಮೇಲಿನ ಚೀಟಿಗೆ ಸಹಿ ಮಾಡಿದೆ. ಆ ಸಮಯದಲ್ಲಿ ಮಾಡಿದ ಮಹಜರ್ ಗೆ ನಾವು ಸಹಿ ಹಾಕಿರುತ್ತೇವೆ. ಸಾಕ್ಷಿ ಸದರಿ ಮಹಜರ್ ಮೇಲಿರುವ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಮಹಜರ್ ನ್ನು ನಿಪಿ 32 ಎಂತಲು , ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 32(ಎ) ಎಂತಲು ಗುರುತುಪಡಿಸಿಕೊಳ್ಳಲಾಯಿತು. ಆ ಸಮಯದಲ್ಲಿ ಪೋಟೋಗಳನ್ನು ತೆಗೆಯಲಾಯಿತು. ಸದರಿ ಪೋಟೋಗಳನ್ನು ನಾನು ಈಗ ನೋಡುತ್ತಿದ್ದೇನೆ. ಅವುಗಳನ್ನು ನಿಪಿ 33 ಮತ್ತು 34 ಎಂದು ಗುರುತುಪಡಿಸಿಕೊಳ್ಳಲಾಯಿತು. ಸದರಿ ಪೋಟೋಗಳಲ್ಲಿ ನಾನು ಇದ್ದೇನೆ. ಆ ಮೊಬೈಲನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ತೆರೆದ ನ್ಯಾಯಾಲಯದಲ್ಲಿ ಸೀಲು ಮಾಡಿದ್ದ ಬಿಳಿಯ ಬಟ್ಟೆಯ ಬ್ಯಾಗ್ ನಿಂದ ಸೀಲನ್ನು ತೆಗೆದು ಅದರೊಳಗಿದ್ದ ಮೊಬೈಲನ್ನು ತೆರೆದು ತೋರಿಸಲಾಗಿದ್ದು , ಆ ಮೊಬೈಲನ್ನು ಸಾಕ್ಷಿ ಗುರುತಿಸಿರುತ್ತಾರೆ. ಸದರಿ ಮೊಬೈಲನ್ನು ಎಂ ಒ 12 ಎಂದು ಗುರುತುಪಡಿಸಿಕೊಳ್ಳಲಾಯಿತು. ಆ ಬಿಳಿಯ ಬಟ್ಟೆಯ ಬ್ಯಾಗ್ ನ ಮೇಲಿರುವ ಚೀಟಿಯಲ್ಲಿ ನನ್ನ ಸಹಿ ಇರುತ್ತದೆ. ಈ ಬಗ್ಗೆ ಪೋಲೀಸರ ಮುಂದೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ

ಪಾಟೀ ಸವಾಲುಃ 1 ಮತ್ತು 3 ನೇ ಆರೋಪಿ ಪರ ವಕೀಲರಿಂದಃ

6. ಶಶಿಕುಮಾರ್ ನನಗೆ ಗೊತ್ತು. ಆತನ ತಂದೆ ಸಹ ಗೊತ್ತು. ಅವರೂ ಸಹ ಕುಡಿಮಂಡಿಯಲ್ಲೇ ವಾಸ ಮಾಡುತ್ತಾರೆ. 24 ನೇ ತಾರೀಖಿನಂದು ನಾನು ಎನ್ ಆರ್ ಪೋಲೀಸ್ ಠಾಣೆಗೆ ಹೋದಾಗ ಅಲ್ಲಿದ್ದ ಆ ಹುಡುಗನ ಪರಿಚಯ ನನಗೆ ಇರಲಿಲ್ಲ. ಆ ಹುಡುಗನನ್ನು ನನಗೆ ಪರಿಚಯಿಸಿದವರು ಇನ್ಸ್ ಪೆಕ್ಟರ್ ರವರು ಅಂದರೆ ಚಾ,ಸಾ. 48 ರವರು. ಆ ಹುಡುಗನ ಜೇಬಿನಲ್ಲಿ ಮೊಬೈಲ್ ಇತ್ತು. ಅದನ್ನು ತೆಗೆದುಕೊಟ್ಟ . ಅದು ಆನ್ ನಲ್ಲಿತ್ತು. ಆ ಪೋಟೋಗಳು ಮತ್ತು ಮೆಸೇಜ್ ಗಳು ವ್ಯಾಟ್ಸ್ ಅಪ್ ನಲ್ಲಿದ್ದವು. ಅದರಲ್ಲಿ ಗೂಗಲ್ ಅಕೌಂಟ್ ಇತ್ತೋ ಇಲ್ಲವೋ, ನಮಗೆ ತೋರಿಸಲಿಲ್ಲ. ಚಾ,ಸಾ. 48 ರವರ ಜೊತೆಯಲ್ಲಿ ಅಲ್ಲಿಯ ಪೋಲೀಸ್ ಮಂಜು ಇದ್ದರು. ವ್ಯಾಟ್ಸ್ ಅಪ್ ಓಪನ್ ಮಾಡಿದ ನಂತರ, ವಿನು ಅಣ್ಣ ಎಂದು ಸೇವ್ ಮಾಡಿದ್ದ ನಂಬರ್ ನ್ನು ತೆರೆದು ತೋರಿಸಿದ. ಅ ವಿನು ಅಣ್ಣನ ಪೋನ್ ನಂಬರ್ ನನಗೆ ಗೊತ್ತಿಲ್ಲ. ವಿನು ಅಣ್ಣ ಎಂದು ಸೇವ್ ಆಗಿದ್ದ ನಂಬರ್ ನಲ್ಲಿ ಡಿ.ಪಿ. ಪೋಟೋವನ್ನು ನಮಗೆ ತೋರಿಸಲಿಲ್ಲ. ಆ ಮೂರು ಮೆಸೇಜ್ ಗಳು ಹಾಗೂ ಪೋಟೋಗಳನ್ನು ಡೌನ್ ಲೋಡ್ ಮಾಡಲಿಲ್ಲ. ಆ ಮೊಬೈಲ್ ನ ಸಿಮ್ ನ್ನು ನನಗೆ ತೋರಿಸಲಿಲ್ಲ.

7. ಆ ಪೋನ್ ನಲ್ಲಿ ಆ ಮೆಸೇಜ್ ಮತ್ತು ಪೋಟೋಗಳನ್ನು ಯಾರು ಯಾವಾಗ ಸೆಂಡ್ ಮಾಡಿದ್ದರು ಎನ್ನುವುದನ್ನು ತೋರಿಸಿದರು. ಅವು ವಿನು ಅಣ್ಣ ಎನ್ನುವ ನಂಬರ್ ನಿಂದ ಬಂದಿದ್ದವು. ವಿನು ಅಣ್ಣ ಎಂದು ಸೇವ್ ಆಗಿದ್ದ ವ್ಯಕ್ತಿ ಯಾರು ಎಂದು ಪ್ರೊಫೈಲ್ ಪೋಟೋವನ್ನು ನನಗೆ ತೋರಿಸಿರುವುದಿಲ್ಲ. ಆ ದಿನ ಅಲ್ಲಿ ಪೋಲೀಸರು ಅಮಾನತ್ತು

ಪಡಿಸಿಕೊಂಡ ಮೊಬೈಲ್ ಅಂದರೆ ಎಂ ಒ 11, ಜಯಸೂರ್ಯನಿಗೆ ಸೇರಿದ ಮೊಬೈಲ್ ಆಗಿರುವುದಿಲ್ಲ ಎನ್ನುವುದು ಸರಿಯಲ್ಲ. ನಾನು ಹೇಳಿದಂತೆ ಆ ಮೊಬೈಲ್ ನಲ್ಲಿ ಮೂರು ಮೆಸೇಜ್ ಗಳು ಮತ್ತು 3 ಪೋಟೋಗಳನ್ನು ನಾನು ನೋಡಿರುವುದಿಲ್ಲ ಎನ್ನುವುದು ಸರಿಯಲ್ಲ.

8. ದಿಃ 02.01.2021 ರಂದು ನನಗೆ ಯಾವುದೇ ಲಿಖಿತ ನೋಟೀಸನ್ನು ಪೋಲೀಸರು ನೀಡಿರುವುದಿಲ್ಲ. ಪೋನ್ ಮಾಡಿ ಕರೆಸಿಕೊಂಡರು. ನಾನು ಮತ್ತು ಶಶಿ ಕುಮಾರ್ ಇಬ್ಬರು ಠಾಣೆಗೆ ಹೋದೆವು. ಅಲ್ಲಿ ಅವರು ಸೈಬರ್ ಠಾಣೆಗೆ ಹೋಗಬೇಕು ಎಂದು ತಿಳಿಸಿದರು. ನಾವು ಠಾಣೆಯಲ್ಲಿ ಇದ್ದೆವು ಆಗ ಚಾ,ಸಾ. 48 ಬಂದರು. ಚಾ,ಸಾ. 48 ರವರು ಸಣ್ಣ ಬಿಳಿ ಬಾಗ್ ನಲ್ಲಿ ಇದ್ದಂತಹ ಮೊಬೈಲನ್ನು ಹೊರ ತೆರೆದರು. ಆ ಮೊಬೈಲ್ ಜಯಸೂರ್ಯನಿಗೆ ಸೇರಿದ್ದು ಎಂದು ಹೇಳಿದರು. ಆಗ ಆ ಬಿಳಿ ಬ್ಯಾಗ್ ನ ಮೇಲೆ ಸೀಲು ಮತ್ತು ಚೀಟಿಯ ಮೇಲೆ ನಮ್ಮ ಸಹಿಗಳು ಹಾಗೆಯೇ ಇದ್ದವು. ಸದರಿ ಮೊಬೈಲ್ ನಲ್ಲಿ ಇರುವ ಮಾಹಿತಿಯನ್ನು Extract ಮಾಡಬೇಕು ಎಂದು ತಿಳಿಸಿದರು. ಆ ದಿನ ಎನ್ ಆರ್ ಪೋಲೀಸ್ ಠಾಣೆಯಲ್ಲಿ ಆ ಮೊಬೈಲ್ ನಲ್ಲಿ ಇದ್ದಂತಹ ಮಾಹಿತಿಯನ್ನು download ಮಾಡಿರುವುದಿಲ್ಲ. ಸೈಬರ್ ಠಾಣೆಯಲ್ಲಿ download ಮಾಡಿದರು. ಸೈಬರ್ ಠಾಣೆಯಲ್ಲಿ ಇದ್ದಂತಹ ಕಂಪ್ಯೂಟರ್ ಯಾವ ಕಂಪನಿಯದ್ದು ಎಂದು ನನಗೆ ಗೊತ್ತಾಗಲಿಲ್ಲ. ಸೈಬರ್ ಠಾಣೆಯಲ್ಲಿ ತೆರೆದಂತಹ ಫೋನ್ ಸ್ವಿಚ್ ಆಫ್ ಆಗಿತ್ತು. ಆನ್ ಮಾಡಿದಾಗ ಚಾರ್ಜ ಇರಲಿಲ್ಲ. ನೆಟ್ ಆನ್ ಮಾಡಿರುವುದಿಲ್ಲ. 24 ನೇ ತಾರೀಖು ಜಯಸೂರ್ಯ ಆ ಮೊಬೈಲನ್ನು ಚಾ.ಸಾ. 48 ರವರ ಮುಂದೆ ಓಪನ್ ಮಾಡಿದಾಗ, ಅದಕ್ಕೆ ಯಾವುದೇ ಪ್ಯಾಟರ್ನ್ ಇರಲಿಲ್ಲ. ಅಲ್ಲಿ ತೋರಿಸಿದ ಮೆಸೇಜ್ ಗಳು ಮತ್ತು ಪೋಟೋಗಳು ವ್ಯಾಟ್ಸ್

ಅಪ್ ನಲ್ಲೇ ಇದ್ದವು. ಅವುಗಳು Images ಗೆ ಹೋಗಿದ್ದವೂೇ ಇಲ್ಲವೂೇ ನನಗೆ ಗೊತ್ತಿಲ್ಲ. ವ್ಯಾಟ್ಸ್ ಅಪ್ ಓಪನ್ ಆಗಲು ನೆಟ್ ಆನ್ ಆಗಿರಬೇಕು ಎನ್ನುವುದು ಗೊತ್ತು.

**9.** ದಿಃ 02.01.2021 ರಂದು ಸೈಬರ್ ಠಾಣೆಗೆ ಹೋದಾಗ ಅಲ್ಲಿ ನೆಟ್ ಆನ್ ಮಾಡಿರಲಿಲ್ಲ. ವ್ಯಾಟ್ಸ್ ಅಪ್ ಓಪನ್ ಆಗಿತ್ತು. ನೆಟ್ ಆನ್ ಮಾಡದೇ , ವ್ಯಾಟ್ಸ್ ಅಪ್ ಓಪನ್ ಆಗುವುದಿಲ್ಲ ಎನ್ನುವುದು ಸರಿಯಲ್ಲ. ನಾನು ಹೇಳಿದ ಪ್ರಕ್ರಿಯ ನನ್ನ ಮುಂದೆಯೇ ನಡೆಯಿತು. ಅಲ್ಲಿ ಚಿಕ್ಕ ಬಿಳಿ ಬ್ಯಾಗ್ ನಿಂದ ಹೊರ ತೆಗೆದಿದ್ದ ಮೊಬೈಲ್ ನ್ನು ಪುನಃ ಚಾ,ಸಾ. 48 ರವರು ಅದೇ ಬಿಳಿ ಬ್ಯಾಗ್ ಗೆ ಹಾಕಿ ಅದರ ಬಾಯಿಯನ್ನು ಹೊಲೆದರು. ದಿಃ 02.01.2021 ರಂದು ಆ ಬಿಳಿ ಬಟ್ಟೆಯ ಬ್ಯಾಗ್ ಮೇಲೆ ಪುನಃ ನನ್ನ ಸಹಿಯನ್ನು ಪಡೆದಿರುವುದಿಲ್ಲ. ನಿಪಿ 30 ಮತ್ತು 31 ಪೋಟೋಗಳು ಆ ದಿನ ತೆಗೆದ ಪೋಟೋಗಳಾಗಿರುವುದಿಲ್ಲ ಎನ್ನುವುದು ಸರಿಯಲ್ಲ. ನಿಪಿ 30 ಮತ್ತು 31 ರಲ್ಲಿ ಮಧು ಅಂದರೆ ಸೈಬರ್ ಕ್ರೈಂ ನ ಪೋಲೀಸ್ ಇರುವುದಿಲ್ಲ. ಅಲ್ಲಿ ನನ್ನ ಹೇಳಿಕೆಯನ್ನು ಪಡೆದಿರುವುದಿಲ್ಲ.

**10.** ಪುನಃ ನನಗೆ ಎನ್ ಆರ್ ಪೋಲೀಸರು ಪೋನ್ ಮಾಡಿದ್ದು ದಿಃ 16.02.2021 ರಂದು. ಠಾಣೆಗೆ ಹೋದಾಗ ಸಂಜೆ 04.00 ಗಂಟೆ ಆಗಿತ್ತು. ನಾನು ಮೊದಲು ಹೋಗಿದ್ದೆ. ಶಶಿಕುಮಾರ್ ನಂತರ ಬಂದ. ಆ Samsung Galaxy A–21S ವಿನಯ್ ಗೆ ಸೇರಿದ ಮೊಬೈಲ್ ಎಂದು ತಿಳಿಸಿದರು. ಆ ಮೊಬೈಲ್ ನಂಬರ್ ನನಗೆ ಗೊತ್ತಿಲ್ಲ. ಅಲ್ಲಿ ವಿನಯ್ ಇರಲಿಲ್ಲ. ಆ ಮೊಬೈಲ್ ಗೆ ಪ್ಯಾಟರ್ನ್ ಇತ್ತೂೇ ಇಲ್ಲವೂೇ ನನಗೆ ಗೊತ್ತಿಲ್ಲ. ಅ ಮೊಬೈಲ್ ಠಾಣೆಯಲ್ಲಿತ್ತು. ಆ ಮೊಬೈಲನ್ನು ಸೀಲು ಮಾಡಿ ಬಿಳಿ ಬ್ಯಾಗ್ ನಲ್ಲಿ ಇಟ್ಟಿರಲಿಲ್ಲ. ಆ ಮೊಬೈಲನ್ನು ಯಾರು ತಂದರು ಎಂದು ನನಗೆ ಗೊತ್ತಿಲ್ಲ. ಅದರಲ್ಲಿ ಸಿಮ್ ಇರಲಿಲ್ಲ. ಆ

ಮೊಬೈಲ್ ಮತ್ತು ಸಿಮ್ ಕಾರ್ಡ ಯಾರ ಹೆಸರಿನಲ್ಲಿತ್ತು ಎನ್ನುವುದು ನನಗೆ ಗೊತ್ತಾಗಲಿಲ್ಲ. ಮೊಬೈಲ್ ಖರೀದಿಸಲು ಸಾಲವನ್ನು ಎಲ್ಲಿ ಪಡೆಯಲಾಗಿತ್ತು ಎನ್ನುವುದು ಗೊತ್ತಾಗಲಿಲ್ಲ. ಸಿಮ್ ಇಲ್ಲ ಎಂದು ಹೇಳಿದರು. ಆದರೆ ಆ ಸಿಮ್ ಎಲ್ಲಿಗೆ ಹೋಗಿತ್ತು, ಯಾರ ಬಳಿಯಲ್ಲಿತ್ತು ಎನ್ನುವುದನ್ನು ನನಗೆ ಹೇಳಲಿಲ್ಲ. ಸೈಬರ್ ಠಾಣೆಗೆ ಹೋದಾಗ ಆ ಮೊಬೈಲ್ ಚಾ,ಸಾ. 48 ರವರ ಕೈಯಲ್ಲಿತ್ತು. ಸೈಬರ್ ಠಾಣೆಯಲ್ಲಿ, ಆ ಮೊಬೈಲ್ ನಲ್ಲಿ ಸಿಮ್ ಇರುವುದಿಲ್ಲ ಎಂದು ತಿಳಿಸಿದರು. ಆ ದಿನ ಯಾವುದೇ ಮಾಹಿತಿಯನ್ನು Extract ಮಾಡಲಿಲ್ಲ. ಪುನಃ ಆ ಮೊಬೈಲನ್ನು ಬಿಳಿ ಬಟ್ಟೆ ಯ ಬ್ಯಾಗಿನ ಒಳಗೆ ಹಾಕಿದರು. ನನ್ನ ಸಹಿಯನ್ನು ಪಡೆದರು.

**11.** EMI ಕಟ್ಟಿದವರು ಯಾರು ಎಂದು ನನಗೆ ಗೊತ್ತಿಲ್ಲ. ಡ್ಯೂಪ್ಲಿಕೇಟ್ ಸಿಮ್ ಕಾರ್ಡ ತರಿಸಿದವರು ಯಾರು ಎಂದು ನನಗೆ ಗೊತ್ತಿಲ್ಲ. ಸೈಬರ್ ಠಾಣೆಯಲ್ಲಿ ಡ್ಯೂಪ್ಲಿಕೇಟ್ ಸಿಮ್ ಮೊಬೈಲ್ ಗೆ ಅಳವಡಿಸಿದವರು ಚಾ,ಸಾ. 48 ರವರು. ಒಮ್ಮೆ ಸಿಮ್ ಕಾರ್ಡ ನ್ನು ಮೊಬೈಲ್ ನಿಂದ ಹೊರ ತೆಗೆದಲ್ಲಿ ಅದರಲ್ಲಿ ಇದ್ದಂತಹ Contact numbers, photos ಎಲ್ಲವೂ Disappear ಆಗಿರುತ್ತವೆ ಎಂದು ಮಾಡಿದ ಸಲಹೆಗೆ ಸಾಕ್ಷಿ, Contact ಗಳು ಮಾತ್ರ ಹೋಗುತ್ತವೆ , ಉಳಿದವು ಹಾಗೆಯೇ ಇರುತ್ತದೆ ಎನ್ನುತ್ತಾರೆ. ಗೂಗಲ್ ಅಕೌಂಟ್ ಇದ್ದಲ್ಲಿ ಮಾತ್ರವೇ ಎಲ್ಲ ಮಾಹಿತಿಗಳು ಇರುತ್ತವೆ ಎನ್ನುವುದು ಸರಿ.

**12.** ದಿಃ 24 ರಂದು , ಜಯಸೂರ್ಯ ಹಾಜರುಪಡಿಸಿದ ಮೊಬೈಲ್ ನ ವ್ಯಾಟ್ಸ್ ಅಪ್ ನಲ್ಲಿ ಬೆಳಗಿನ ಜಾವ 02.55, 02.56 ರ ನಡುವೆ ಬಂದಂತಹ ಮೆಸೇಜ್ ಗಳು ಮತ್ತು ಪೋಟೋಗಳನ್ನು ತೋರಿಸಿದರು. ಸಮಯವನ್ನು ಸಹ ತೋರಿಸಿದರು. ನಿಪಿ 14 ಮತ್ತು 15 ಪೋಟೋಗಳಲ್ಲಿ ಅವುಗಳನ್ನು ಕಳುಹಿಸಿರುವ ಸಮಯ ಕಂಡು ಬರುವುದಿಲ್ಲ

ಎನ್ನುವುದು ಸರಿ . ಸಾಕ್ಷಿ ಸ್ವತಃ ನುಡಿಯುತ್ತಾರೆ , ಅವುಗಳನ್ನು ಕಳುಹಿಸಿದ ಸಮಯ ವ್ಯಾಟ್ಸ್ ಅಪ್ ನಲ್ಲಿಕಾಣುತ್ತಿತ್ತು ಎಂದು. ವ್ಯಾಟ್ಸ್ ಅಪ್ ನಿಂದ, ಆ ಮೆಸೇಜ್ ಮತ್ತು ಪೋಟೋಗಳನ್ನು ಕಳುಹಿಸಿದ ಬಾಬ್ತು Details ನ Print out ನ್ನು ತೆಗೆದುಕೊಂಡಿರುವುದಿಲ್ಲ. ಆ ಮೊಬೈಲ್ ನಿಂದ ಆ 3 ಪೋಟೋಗಳನ್ನು download ಮಾಡಿ ತೆಗೆದುಕೊಂಡಿರುವುದಿಲ್ಲ ಎನ್ನುವುದು ಸರಿಯಲ್ಲ. ಆ ಮೊಬೈಲ್ ನಲ್ಲಿ ನಾನು ಮೇಲೆ ಹೇಳಿದ 3 ಪೋಟೋಗಳನ್ನು ನೋಡಿರುವುದಿಲ್ಲ ಎನ್ನುವುದು ಸರಿಯಲ್ಲ.

**13.** ನಿಪಿ 33 ಮತ್ತು 34 ರಲ್ಲಿ ಚಾ,ಸಾ.48 ರವರ ಕೈಯಲ್ಲಿ ಇರುವಂತಹ ಬಿಳಿ ಬಣ್ಣದ ಸಣ್ಣ ಬ್ಯಾಗ್ ನಲ್ಲಿ ಇರುವ ಮೊಬೈಲ್ ನಾನು ಹೇಳಿದ Samsung Galaxy A21S ಮೊಬೈಲ್ ಆಗಿರುವುದಿಲ್ಲ ಎನ್ನುವುದು ಸರಿಯಲ್ಲ. ನಾನು ಹೇಳಿದ ಈ ಮೊಬೈಲನ್ನು ಸದರಿ ಬಿಳಿ ಬಣ್ಣದ ಸಣ್ಣ ಬ್ಯಾಗ್ ನಿಂದ ತೆರೆದು ನನಗೆ ತೋರಿಸಿರುವುದೇ ಇಲ್ಲ ಎನ್ನುವುದು ಸರಿಯಲ್ಲ.

**14.** ನಾನು ಈ ಡ್ಯೂಪ್ಲಿಕೇಟ್ ಸಿಮ್ ಬಗ್ಗೆ ಯಾವುದೇ ಹೇಳಿಕೆಯನ್ನು ಚಾ.ಸಾ. 48 ರವರ ಮುಂದೆ ನೀಡಿರುವುದಿಲ್ಲ.

**15.** ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ದಿನಾಂಕಗಳಂದು ಎನ್ ಆರ್ ಪೋಲೀಸ್ ಠಾಣೆಗೆ ಹೋಗಿರುವುದಿಲ್ಲ ಹಾಗೂ ಸೈಬರ್ ಪೋಲೀಸ್ ಠಾಣೆಗೂ ಹೋಗಿರುವುದಿಲ್ಲ ಎನ್ನುವುದು ಸರಿಯಲ್ಲ. ನಿಪಿ 32 ರಲ್ಲಿ Samsung Mobile ನಿಂದ ಮಾಹಿತಿಯನ್ನು extract ಮಾಡಿದ ಬಗ್ಗೆ ಬರೆಯಲಾಯಿತು. ಸದರಿ ಮಹಜರ್ ಗೆ ಶಶಿ ಕುಮಾರ್ ಸಹಿ ಹಾಕಿರುತ್ತಾರೆ. ಡಾಟಾ extract ಮಾಡಿದವರು ಮಧು ಎನ್ನುವವರು.

ನಿಪಿ 32 ನ್ನು ಟೈಪ್ ಮಾಡಿದವರು ಯಾರು ಎಂದು ಗೊತ್ತಿಲ್ಲ. ನಾನು ಸೈಬರ್ ಠಾಣೆಗೆ ಹೋಗಿರದಿದ್ದರೂ ಸಹ ಹೋಗಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 2 ನೇ ಆರೋಪಿ ಪರ ವಕೀಲರು ಮೇಲ್ಕಂಡ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರು ವಿಚಾರಣೆ : ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**